

7 ತಿಂಗಳ ಮಗುವಾದರೂ ಕೇವಲ 3.4 ಕೆ.ಜಿ ಭಾರವಿರುವ ಸೊಮಾಲಿಯಾದ ಈ ಮಗುವಿನ ಸಾವಿಗೂ ಮುನ್ನ ತೆಗೆದ ಚಿತ್ರವಿದು. ಬರಗಾಲ ಪೀಡಿತ ಸೊಮಾಲಿಯಾದಲ್ಲಿ ವಿಶ್ವಸಂಸ್ಥೆಯು ಆಹಾರ ಪೊಟ್ಟಣ ಎಸೆಯುವುದನ್ನು ಬಂಡುಕೋರರು ತಡೆದ ಪರಿಣಾಮ ಜನತೆ ಊಟಕ್ಕಿಲ್ಲದೆ ಪರಿತಪಿಸುವಂತಾಗಿದೆ. ಆಹಾರ ಅರಸಿ ಕೀನ್ಯಾ, ಇಥೋಪಿಯಾದತ್ತ ಜನತೆ ವಲಸೆ ಹೋಗಲು ಆರಂಭಿಸಿದ್ದು, ನಿರಾಶ್ರಿತರ ಶಿಬಿರವನ್ನು ಸೇರಿಕೊಳ್ಳುತ್ತಿದ್ದಾರೆ.

## ಜವಾನ ಕೆಲಸಕ್ಕೆ ಪಿಎಚ್‌ಡಿ, ಪಿಜಿ ಪದವೀಧರರು

**ಜೈಪುರ:** ಸರ್ಕಾರಿ ಕೆಲಸವೆಂದರೆ ಯಾರಿಗೆ ಬೇಡ ಹೇಳಿ..! ಸರ್ಕಾರಿ ಹುದ್ದೆ ಹೊಂದುವುದೇ ಮಹಾಭಾಗ್ಯ ಎನ್ನುವ ಮನಸ್ಸು ಎಲ್ಲರಿಗೂ ಇದೆ. ಆದ್ದರಿಂದಲೇ ಕಚೇರಿ ಜವಾನ ಹುದ್ದೆ ಆದ್ರೂ ಎಷ್ಟೋ ವಿದ್ಯಾವಂತರು ಆ ಕೆಲಸಕ್ಕೆ ಹಂಬಲಿಸುತ್ತಾರೆ. ಇದಕ್ಕೊಂದು ಸಾಕ್ಷಿ ಉದಯ್‌ಪುರದ ಮೋಹನ್‌ಲಾಲ್ ಸುಖಾಡಿಯಾ ವಿ.ವಿ. ಕಳೆದ ತಿಂಗಳು ವಿ.ವಿಯಿಂದ 15 ಕಚೇರಿ ಜವಾನ (ಪ್ಯೂನ್) ಹುದ್ದೆಗೆ ಅರ್ಜಿ ಕರೆಯಲಾಗಿದ್ದು, ಇದಕ್ಕೆ ಅರ್ಜಿ ಹಾಕಿದವರಲ್ಲಿ ಹೆಚ್ಚಿನವರು ಪಿಎಚ್‌ಡಿ, ಸ್ನಾತಕೋತ್ತರ ಪದವಿ ಪಡೆದವರೇ ಆಗಿದ್ದಾರೆ. ಉದ್ಯೋಗ ಭದ್ರತೆ ವಿದ್ಯಾವಂತ ಯುವಕರನ್ನೂ ಸರ್ಕಾರಿ ಕೆಲಸದತ್ತ ಆಕರ್ಷಿಸುತ್ತಿದೆ. ಇದರಿಂದ ಉನ್ನತ ಶಿಕ್ಷಣ ಪಡೆದವರೂ ಅರ್ಜಿ ಹಾಕಿದ್ದಾರೆ. ಸದ್ಯ ಪ್ರಕ್ರಿಯೆ ನಡೆಯುತ್ತಿದ್ದು ಶೀಘ್ರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ವಿ.ವಿ. ಅಧಿಕಾರಿಗಳು ಹೇಳಿದ್ದಾರೆ. ಕಚೇರಿ ಜವಾನ ಕೆಲಸಕ್ಕೆ ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಆಗಿದ್ದು, 7,440ರೂ.ವರೆಗೆ ವೇತನವಿದೆ. 'ಎಷ್ಟೊಂದು ಲಕ್ಷಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ಕೆಲಸಕ್ಕಾಗಿ ಕಷ್ಟ ಪಡುವುದು ತಪ್ಪಿಲ್ಲ. ಆದ್ದರಿಂದ ಈ ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದೇನೆ' ಎಂದು ಎಮ್‌ಬಿಎ ಪದವೀಧರರೊಬ್ಬರು ಹೇಳಿದ್ದಾರೆ.

## ಪಂಚ್‌ರ್!

**ಪಾಕ್ ವಿದೇಶಾಂಗ ಮಂತ್ರಿ ಹೀನಾ ರಬ್ಬಾನಿ ಖಾರ್‌ರನ್ನು ನೋಡಿ ಮರುಳಾಗಿ ರಾಮಗೋಪಾಲ್ ವರ್ಮಾ ಅವ್ರನ್ನೇ ಹಾಕ್ಕೊಂಡು ಸಿನಿಮಾ ತೆಗೀಬೇಕು ಅಂತಿದ್ದಾರಂತೆ.**

– ಅದಕ್ಕೆ ನಾವು 2 ಹೆಸರು ಶಿಫಾರಸು ಮಾಡ್ತಿದ್ದೇವೆ:

1. ರಬ್ಬಾ ರಬ್ಬಾ ಪ್ಯಾರ್ ಹೋಗಯಾ
2. ಹೀನಾ ಪ್ಯಾರ್ ದೇನಾ



ನಾನು ಐಟಂ ಸಾಂಗ್‌ಗಳಲ್ಲಿ ಅಭಿನಯಿಸಲು ಹಿಂಜರಿಯುವುದಿಲ್ಲ. ಬಹಳ ಮಜಾ ಇರುತ್ತೆ. ಆ ಸಂಗೀತಕ್ಕೆ ಹೆಜ್ಜೆ ಹಾಕುವುದು ಖುಷಿ ಇದೆ. ಕೆಲವೊಮ್ಮೆ ನಾನು ಐಟಂ ಹಾಡನ್ನು ಹಾಡಿದ್ದೇನೆ.

● **ಅಭಿಷೇಕ್ ಬಚ್ಚನ್**, ಬಾಲಿವುಡ್ ನಟ



ಈಗ ಚಂಡಮಾರುತ, ಸುನಾಮಿಯ ಬಗ್ಗೆ ಮೊದಲೇ ತಿಳಿದುಕೊಳ್ಳುವ ವಿಜ್ಞಾನಿಗಳು ಇನ್ನು 10 ವರ್ಷದಲ್ಲಿ ಭೂಕಂಪನವನ್ನೂ ತಿಳಿದುಕೊಳ್ಳಲು ಸಮರ್ಥರಾಗುತ್ತಾರೆ.

● **ಎ.ಪಿ.ಜೆ.ಅಬ್ದುಲ್ ಕಲಾಂ**, ಮಾಜಿ ರಾಷ್ಟ್ರಪತಿ

# 2ಜಿ ಪ್ರಕರಣದಲ್ಲೀಗ ಆರ್‌ಬಿಐ ಗವರ್ನರ್ ಹೆಸರು

## ■ ಸುಬ್ಬರಾವ್ ಮೇಲೆ ಕೇಸು ಹಾಕಿ, ಇಲ್ಲವಾದರೆ ನನ್ನನ್ನೂ ಜೈಲಿಂದ ಬಿಡುಗಡೆ ಮಾಡಿ: ಕೋರ್ಟಿನಲ್ಲಿ ಬೆಹುರಾ ವಾದ

**ನವದೆಹಲಿ:** ಜೈಲು ಸೇರಿರುವ ಮಾಜಿ ಟೆಲಿಕಾಂ ಮಂತ್ರಿ ಎ.ರಾಜಾ ಸಿಬಿಐ ನ್ಯಾಯಾಲಯದಲ್ಲಿ ಪ್ರಧಾನಿ ಹಾಗೂ ಚಿದಂಬರಂ ಮೇಲೆ ಗೂಬೆ ಕೂರಿಸಿದ ನಂತರ ಇದೀಗ ಅವರ ಜೊತೆ ಜೈಲಿನಲ್ಲಿರುವ ಮಾಜಿ ಟೆಲಿಕಾಂ ಕಾರ್ಯದರ್ಶಿ ಸಿದ್ಧಾರ್ಥ ಬೆಹುರಾ ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಮೇಲೆ ಕೆಸರೆರಚಿದ್ದಾರೆ.



ಸಿದ್ಧಾರ್ಥ ಬೆಹುರಾ

2ಜಿ ಪರವಾನಗಿಯ ಬೆಲೆ ಏರಿಸಬಾರದು ಎಂದು ನಿರ್ಧಾರ ಕೈಗೊಂಡಿದ್ದು ಆಗಿನ ಹಣಕಾಸು ಕಾರ್ಯದರ್ಶಿ ಡಿ.ಸುಬ್ಬರಾವ್. ಅವರೀಗ ಆರ್‌ಬಿಐ ಗವರ್ನರ್. ಯಾವ ತಪ್ಪೂ ಮಾಡದ ನನ್ನ ಮೇಲೆ ಪ್ರಕರಣ ದಾಖಲಿಸಿ ಜೈಲಿಗೆ ತಳ್ಳಿದ್ದು ಸರಿಯಾದರೆ ಅವರ ಮೇಲೂ ಕೇಸು ಹಾಕಿ ಎಂದು ಬೆಹುರಾ ಬುಧವಾರ ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಹೇಳಿದರು.

ತರಂಗಾಂತರ ಪರವಾನಗಿಯ ಬೆಲೆ ಪರಿಷ್ಕರಿಸಬಾರದು ಎಂಬ ಸರ್ಕಾರದ ನಿರ್ಧಾರದಂತೆ ನಾನು ನಡೆದುಕೊಂಡಿದ್ದೇನಷ್ಟೆ. ಮೇಲಾಗಿ ನಾನು ಟೆಲಿಕಾಂ ಸಚಿವಾಲಯಕ್ಕೆ ಕಾರ್ಯದರ್ಶಿಯಾಗಿದ್ದು 2008ರಲ್ಲಿ. ಅಷ್ಟರಲ್ಲಿ ತರಂಗಾಂತರ ಬೆಲೆ ನಿಗದಿ, ಪ್ರವೇಶ ಶುಲ್ಕ, ಮೊದಲು ಬಂದವರಿಗೆ ಆದ್ಯತೆ ಇತ್ಯಾದಿ ನೀತಿಗಳನ್ನು ಅಂತಿಮಗೊಳಿಸಿದ್ದರು. ನನ್ನನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿಸುವ ಬದಲು ಆರೋಪಿಯನ್ನಾಗಿ ಮಾಡಲಾಗಿದೆ. ನನ್ನನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ತರಂಗಾಂತರ ಹಂಚಿಕೆಯ ಪ್ರವೇಶ ಶುಲ್ಕವನ್ನು 1659 ಕೋಟಿ ರೂ.ಗೆ ನಿಗದಿಪಡಿಸಿದ್ದು 2001ರಲ್ಲಿ ಎನ್‌ಡಿಎ ಆಡಳಿತದಲ್ಲಿ. 2007ರಲ್ಲಿ ನಡೆದ ಒಂದು ಸಭೆಯಲ್ಲಿ ಈ ಬೆಲೆ ಪರಿಷ್ಕರಿಸುವುದು ಬೇಡವೆಂದು ಸುಬ್ಬರಾವ್ ಹೇಳಿದರು. ಆ ಸಭೆಯಲ್ಲಿವಿತ್ತಸಚಿವಚಿದಂಬರಂಕೂಡಹಾಜರಿದ್ದರು. ಸುಬ್ಬರಾವ್ ಹಣಕಾಸು ಕಾರ್ಯದರ್ಶಿಯಾಗಿ ಯಾವ ತಪ್ಪೂ ಮಾಡಿಲ್ಲವಾದರೆ ನಾನು ಹೇಗೆ ತಪ್ಪು ಮಾಡಿದಂತಾಗುತ್ತದೆ ಎಂದು ಬೆಹುರಾ ಪ್ರಶ್ನಿಸಿದರು.

ಇದಲ್ಲದೆ, ಬೊಕ್ಕಸಕ್ಕೆ 2ಜಿ ಹಂಚಿಕೆ ಅಕ್ರಮದಿಂದ 30 ಸಾವಿರ ಕೋಟಿ ರೂ. ನಷ್ಟವಾಗಿರುವುದು ಸರ್ಕಾರದ ನೀತಿಯಿಂದಲೇ ವಿನಾ, ಇದರಲ್ಲಿ ತಮ್ಮ ಪಾತ್ರವೇನೂ ಇಲ್ಲ ಎಂದು ಸ್ಪಷ್ಟಪಡಿಸಿದರು.

## ವಿ.ಕೃ. ಗೋಕಾಕ್ ಪುತ್ರ ಎ.ವಿ. ಗೋಕಾಕ್ ವಿಚಾರಣೆ



**ನವದೆಹಲಿ:** 2ಜಿ ಹಗರಣದ ವಿಚಾರಣೆ ನಡೆಸುತ್ತಿರುವಜಂಟಿಸಂಸದೀಯಸಮಿತಿ ಬುಧವಾರ ಎನ್‌ಡಿಎ ಆಡಳಿತದಲ್ಲಿ ಟೆಲಿಕಾಂ ಕಾರ್ಯದರ್ಶಿಯಾಗಿದ್ದ ಎ.ವಿ.ಗೋಕಾಕ್ ಅವರನ್ನು ವಿಚಾರಣೆಗೊಳಪಡಿಸಿತು.

ಪಿ.ಸಿ. ಚಾಕೋ ನೇತೃತ್ವದ ಜಂಟಿ ಸಂಸದೀಯ ಸಮಿತಿ ಎದುರು ಹಾಜರಾದ ಗೋಕಾಕ್, ಅಂದಿನ ಪ್ರಧಾನಿ ಐ.ಕೆ. ಗುಜ್ರಾಲ್‌ರ ಕೆಲ ಸೂಚನೆ ಮೀರಿ ಟ್ರಾಯ್ ಬದಲು ಖಾಸಗಿ ಸಂಸ್ಥೆಗೆ ಟೆಲಿಕಾಂ ಆಪರೇಟರ್‌ಗಳ ಕುರಿತು ಸಮೀಕ್ಷೆ ನಡೆಸಲು ಸೂಚಿಸಿದ್ದಾಗಿ ಒಪ್ಪಿಕೊಂಡರು. ತ್ವರಿತ ಸಮೀಕ್ಷೆಗಾಗಿ ತಾವು ಈ ಕ್ರಮ ಕೈಗೊಂಡಿದ್ದಾಗಿ ಸ್ಪಷ್ಟಪಡಿಸಿದರು.

1996ರಿಂದ 98ರ ಅವಧಿಯಲ್ಲಿ ಎ.ವಿ. ಗೋಕಾಕ್ ಟೆಲಿಕಾಂ ಕಾರ್ಯದರ್ಶಿಯಾಗಿದ್ದರು. ಜ್ಞಾನಪೀಠ ಪ್ರಶಸ್ತಿ ವಿಜೇತ ವಿ.ಕೃ. ಗೋಕಾಕರ ಪುತ್ರರಾದ ಎ.ವಿ. ಗೋಕಾಕ್, ಮಹಾರಾಷ್ಟ್ರ ಕೇಡರ್ ನಿವೃತ್ತ ಐಎಎಸ್ ಅಧಿಕಾರಿ. ನಿವೃತ್ತಿಯ ಬಳಿಕ ಇವರು ಸದ್ಯ ಬೆಂಗಳೂರು ವಾಸಿ.

ಯುಪಿಎಗಿಂತ ಮುಂಚಿನ ಸರ್ಕಾರಗಳ 2ಜಿ ಹಂಚಿಕೆಯಲ್ಲೂ ಅಕ್ರಮ ನಡೆದಿದೆ ಎಂದು ನ್ಯಾ. ಶಿವರಾಜ ಪಾಟೀಲ ಸಮಿತಿ ವರದಿ ನೀಡಿತ್ತು. ಈ ಹಿನ್ನೆಲೆಯಲ್ಲಿ ಜಂಟಿ ಸಂಸದೀಯ ಸಮಿತಿಯು ಯುಪಿಎ ಮುಂಚಿನ 2ಜಿ ಸ್ಪೆಕ್ಟ್ರಂ ಹಂಚಿಕೆಯ ಬಗ್ಗೆಯೂ ವಿಚಾರಣೆ ನಡೆಸುತ್ತಿದೆ.

## ಹಿಂದುಳಿದವರಿಗೆ ಮೀಸಲು ಅನಿವಾರ್ಯ: ಸುಪ್ರೀಂ

**ನವದೆಹಲಿ:** ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲು ಕಟು ವಾಸ್ತವ ಸಂಗತಿ. ಇದನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲೇಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.



ತಮಗಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಮೀಸಲಿನ ಹೆಸರಿನಲ್ಲಿ ತಮ್ಮದೇ ಶೈಕ್ಷಣಿಕ ಸಂಸ್ಥೆಗಳಿಗೆ ಅವಕಾಶ ಗಿಟ್ಟಿಸಿದಾಗ ಸಾಮಾನ್ಯ ವರ್ಗದ ವರ್ಗದ ರಕ್ತ ಕುದಿಯುತ್ತದೆ ಎಂಬುದು ನಮಗೆ ಗೊತ್ತು, ಆದರೆ ಮೀಸಲು ಕಟು ವಾಸ್ತವ ಸಂಗತಿ. ಇದನ್ನು ಅವರು ಅರ್ಥಮಾಡಿಕೊಳ್ಳಲೇ ಬೇಕು. ಅಸಮಾನರನ್ನು ಸಮಾನರಂತೆ ಕಾಣಲು ಸಾಧ್ಯವೇ ಇಲ್ಲ ಎಂದು ಆರ್.ವಿ.ರವೀಂದ್ರನ್ ಮತ್ತು ಎ.ಕೆ.ಪಟ್ನಾಯಕ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಶೇ.27ರಷ್ಟು ಮೀಸಲು ನೀಡುವ ಕುರಿತಾದ ಅರ್ಜಿಯ ವಿಚಾರಣೆ ವೇಳೆ, ಮೀಸಲು ವಿರೋಧಿ ಹೋರಾಟ ಸಮಿತಿ ವಕೀಲರು, ಮೀಸಲಿನಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಮೀಸಲು ನೀತಿಯಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸದೇ ಅವರಿಗೆ ಪ್ರವೇಶ ನೀಡುವುದು ಸರಿಯಲ್ಲ ಎಂದು ವಾದಿಸಿದ್ದರು. ಈ ವೇಳೆ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಇದೇ ವೇಳೆ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಪ್ರವೇಶಕ್ಕೆ ಕಟ್‌ಆಫ್ ಅಂಕ ನಿಗದಿಪಡಿಸುವ ಕುರಿತಾದ ಗೊಂದಲ ಇತ್ಯರ್ಥದ ನಿಟ್ಟಿನಲ್ಲಿ ಇನ್ನೊಂದು ವಿಚಾರಣಾ ಪೀಠ ರಚಿಸುವಂತೆ ಕೋರಿ ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಅವರಿಗೆ ವರ್ಗಾಯಿಸಲು ರವೀಂದ್ರನ್ ಮತ್ತು ಪಟ್ನಾಯಕ್ ಅವರನ್ನೊಳಗೊಂಡ ನ್ಯಾಯಪೀಠ ನಿರ್ಧರಿಸಿತು.

## ಪಾಕ್-ಭಾರತ ವಿಶ್ವಾಸವೃದ್ಧಿ

- ಹೀನಾ ರಬ್ಬಾನಿ-ಕೃಷ್ಣ ಮಾತುಕತೆ ಫಲಪ್ರದ
- ವ್ಯಾಪಾರ ವಹಿವಾಟು ಅಭಿವೃದ್ಧಿಗೆ ನಿರ್ಧಾರ
- ಮಲ್ಟಿಪಲ್ ಎಂಟ್ರಿ ವೀಸಾ ನಿಯಮ ಸಡಿಲ
- ಕಾಶ್ಮೀರ, ಹುರಿಯತ್, ಉಗ್ರವಾದದ ಬಗ್ಗೆಯೂ ಚರ್ಚೆ
- ಮುಂದಿನ ವರ್ಷ ಮತ್ತೊಂದು ಸುತ್ತಿನ ಸಭೆ



ನವದೆಹಲಿಯಲ್ಲಿ ವಿಶ್ವಾಸವೃದ್ಧಿ ಮಾತುಕತೆ ನಡೆಸಿದ ಎಸ್.ಎಂ.ಕೃಷ್ಣ ಮತ್ತು ಹೀನಾ ರಬ್ಬಾನಿ ಖಾರ್.

**ನವದೆಹಲಿ:** ಭಾರತ ಮತ್ತು ಪಾಕಿಸ್ತಾನ ಸಂಬಂಧ ಸುಧಾರಣೆ ನಿಟ್ಟಿನಲ್ಲಿ ಮತ್ತಷ್ಟು ವಿಶ್ವಾಸವೃದ್ಧಿ ಕ್ರಮಗಳನ್ನು ಕೈಗೊಳ್ಳಲು ಎರಡೂ ದೇಶಗಳ ವಿದೇಶಾಂಗ ಸಚಿವರು ನಿರ್ಧರಿಸಿದ್ದಾರೆ.

ಭಾರತದ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣ ಮತ್ತು ಪಾಕ್ ವಿದೇಶಾಂಗ ಸಚಿವೆ ಹೀನಾ ರಬ್ಬಾನಿ ಖಾರ್ ನಡುವಿನ ದ್ವಿಪಕ್ಷೀಯ ಮಾತುಕತೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು. 34 ವರ್ಷದ ಹೀನಾ ಮತ್ತು 79 ವಯಸ್ಸಿನ ಕೃಷ್ಣ ನಡುವೆ ನಡೆದ ಈ ಚರ್ಚೆಗೆ ಹೀನಾರಿಂದ 'ಗ್ಲಾಮರಸ್ ಟಚ್' ಬಂದಿದ್ದು ವಿಶೇಷ.

ಗಡಿ ನಿಯಂತ್ರಣ ರೇಖೆ ಮೂಲಕ ವ್ಯಾಪಾರ-ವಹಿವಾಟು ಅಭಿವೃದ್ಧಿಗೆ ಸಭೆ ನಿರ್ಧರಿಸಿತು. ಅಲ್ಲದೆ, ಕಾಶ್ಮೀರ-ಪಾಕ್ ಆಕ್ರಮಿತ ಕಾಶ್ಮೀರದ ನಡುವೆ ಪ್ರಯಾಣಿಸಲು ಇದ್ದ ಆರು ತಿಂಗಳ ಅವಧಿಯ ಮಲ್ಟಿಪಲ್ ಎಂಟ್ರಿ ವೀಸಾ ನಿಯಮ ಸಡಿಲಗೊಳಿಸಲೂ ಉಭಯ ಸಚಿವರು ನಿರ್ಧರಿಸಿದರು.

ಕಾಶ್ಮೀರ, ಭಯೋತ್ಪಾದನೆ, ಸಿಯಾಚಿನ್ ವಿಷಯಗಳು ಸೇರಿದಂತೆ ಹಲ ಸೂಕ್ಷ್ಮ ವಿಚಾರಗಳೂ ಸಭೆಯಲ್ಲಿ ಪ್ರಸ್ತಾಪವಾದವು. ಅಲ್ಲದೆ, ಹುರಿಯತ್ ನಾಯಕರು ಖಾರ್‌ರನ್ನು ಭೇಟಿ ಮಾಡಿದ್ದರ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪವಾಯಿತು. ಆದರೆ ಅದು ಕೇವಲ ಸೌಜನ್ಯದ ಭೇಟಿಯಾಗಿತ್ತೇ ವಿನಃ ಹೆಚ್ಚಿನ ಅರ್ಥ ಕಲ್ಪಿಸಬಾರದೆಂದು ಖಾರ್ ಸ್ಪಷ್ಟಪಡಿಸಿದರೆಂದು ಮೂಲಗಳು ಹೇಳಿವೆ.

**ಮುಂದಿನ ವರ್ಷ ಮತ್ತೆ ಸಭೆ:** 2012ರ ಮಧ್ಯಭಾಗದಲ್ಲಿ ಉಭಯ ದೇಶಗಳ ವಿದೇಶಾಂಗ ಸಚಿವರು ಮತ್ತೆ ಸಭೆ ಸೇರಿ ವಿಶ್ವಾಸವೃದ್ಧಿ ಮಾತುಕತೆ ಮುಂದುವರೆಸಲು ನಿರ್ಧರಿಸಿದರು.

ಇದಕ್ಕೂ ಮುನ್ನ ಪ್ರಧಾನಿ ಮನಮೋಹನ್ ಸಿಂಗ್, ಬಿಜೆಪಿ ಹಿರಿಯ ನಾಯಕ ಎಲ್.ಕೆ. ಆಡ್ವಾಣಿ, ಲೋಕಸಭೆ ಪ್ರತಿಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅವರನ್ನೂ ಭೇಟಿ ಮಾಡಿ ಸಚಿವೆ ಹೀನಾ ರಬ್ಬಾನಿ ಮಾತುಕತೆ ನಡೆಸಿದರು.

## ಪದ್ಮನಾಭ, ಗುರುವಾಯೂರು ದೇಗುಲಕ್ಕೆ ಬಾಂಬ್ ಬೆದರಿಕೆ

**ಗುರುವಾಯೂರು/ಚೆನ್ನೈ:** 1 ಲಕ್ಷ ಕೋಟಿಗೂ ಹೆಚ್ಚು ಸಂಪತ್ತು ಪತ್ತೆಯಾಗಿರುವ ಕೇರಳದ ಪ್ರಸಿದ್ಧ ಅನಂತ ಪದ್ಮನಾಭಸ್ವಾಮಿ ದೇಗುಲ ಮತ್ತು ಗುರುವಾಯೂರು ಶ್ರೀ ಕೃಷ್ಣ ದೇಗುಲಕ್ಕೆ ಅಲ್ ಖೈದಾ ಉಗ್ರಗಾಮಿ ಸಂಘಟನೆ ಹೆಸರಲ್ಲಿ ಬಾಂಬ್ ಬೆದರಿಕೆ ಪತ್ರ ಬಂದಿದೆ. ಇದಲ್ಲದೆ, ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಮತ್ತು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರನ್ನು ಹತ್ಯೆಗೈಯುವುದಾಗಿಯೂ ಬೆದರಿಕೆ ಹಾಕಲಾಗಿದೆ. ಪತ್ರವನ್ನು ಚೆನ್ನೈಯಿಂದ ರವಾನಿಸಲಾಗಿದೆ. ಹಳೆ ಟೈಪ್ ರೈಟರ್‌ನಿಂದ ಪತ್ರವನ್ನು ಇಂಗ್ಲಿಷ್‌ನಲ್ಲಿ ಟೈಪ್ ಮಾಡಿ ಗುರುವಾಯೂರು ಎಸ್‌ಪಿಗೆ ಪೋಸ್ಟ್ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪತ್ರ ಬಂದ ಕೂಡಲೇ ಎರಡೂ ದೇವಾಲಯಗಳಲ್ಲಿ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ಪಡೆಯಿಂದ ತಪಾಸಣೆ ನಡೆಸಿ ಭದ್ರತೆಯನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ಮೋದಿ, ಜಯಾ ಭದ್ರತಾ ಪಡೆಗಳು ಇನ್ನಷ್ಟು ಕಟ್ಟೆಚ್ಚರ ವಹಿಸಿವೆ. ಪತ್ರ ಚೆನ್ನೈನ ಎಲ್ಲಿಂದ ಬಂದಿದೆ ಎಂಬ ಬಗ್ಗೆ ತನಿಖೆ ಆರಂಭವಾಗಿದೆ.

## ಅಮೋನಿಯಂ ನೈಟ್ರೇಟ್ ರಾಸಾಯನಿಕಕ್ಕೆ ನಿಷೇಧ

**ನವದೆಹಲಿ:** ಇತ್ತೀಚೆಗೆ ಬಾಂಬ್ ತಯಾರಿಕೆಯಲ್ಲಿ ವಿಪರೀತವಾಗಿ ಬಳಕೆಯಾಗುತ್ತಿರುವ ಅಮೋನಿಯಂ ನೈಟ್ರೇಟ್‌ನ ಮುಕ್ತ ವ್ಯಾಪಾರ, ದಾಸ್ತಾನಿಗೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಸ್ಫೋಟಕ ಕಾಯ್ದೆ 1884ರ ಅಡಿ ಅಮೋನಿಯಂ ನೈಟ್ರೇಟನ್ನು ಸೇರಿಸಲಾಗಿದ್ದು ಇದರಿಂದ ಮುಕ್ತ ವ್ಯಾಪಾರಕ್ಕೆ, ಸಾಗಣೆ ಕಡಿವಾಣ ಬೀಳಲಿದೆ. ಮೊನ್ನೆ ಸಂಭವಿಸಿದ ಮುಂಬೈ ಸರಣಿ ಸ್ಫೋಟದ ವೇಳೆಯೂ ಉಗ್ರರು ಅಮೋನಿಯಂ ನೈಟ್ರೇಟ್ ಬಳಸಿದ್ದು ಖಚಿತವಾಗಿದೆ. ಅಮೋನಿಯಂ ನೈಟ್ರೇಟನ್ನು ನಿಷೇಧಿಸಿದರೆ ಕೃಷಿ ವಲಯಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಈವರೆಗೆ ನಿಷೇಧ ನಿರ್ಧಾರವನ್ನು ಕೇಂದ್ರ ಕೈಗೊಂಡಿರಲಿಲ್ಲ.

## ಮಹಾ ಸದನದೊಳಗೆ ಪೇಪರ್ ಎಸೆದ ಮಾಜಿ ಶಾಸಕ

**ಮುಂಬೈ:** ಮಹಾರಾಷ್ಟ್ರ ವಿಧಾನಪರಿಷತ್‌ನ ಮಾಜಿ ಶಾಸಕರೊಬ್ಬರು ಬುಧವಾರ ವಿಧಾನಸಭೆ ಕಲಾಪದ ವೇಳೆ ಪೇಪರ್ ಎಸೆದ ಘಟನೆ ನಡೆಯಿತು. ಕಲಾಪ ನಡೆಯುವ ವೇಳೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಮಾಜಿ ಶಾಸಕ ಲಕ್ಷ್ಮಣ್ ಮಾನೆ, ಅಲೆಮಾರಿಗಳ ಅಭ್ಯುದಯಕ್ಕೆ ಸರ್ಕಾರ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡಿಲ್ಲ ಎಂದು ಆರೋಪಿಸಿ ತಮ್ಮ ಬಳಿ ಇದ್ದ ಕೆಲವೊಂದು ದಾಖಲೆ ಪತ್ರಗಳನ್ನು ಸದಸ್ಯರ ಮೇಲೆ ತೂರಿದರು. ಇದರಿಂದ ಒಂದು ಕ್ಷಣ ಶಾಸಕರೆಲ್ಲಾ ಅವಕ್ಕಾದರು. ತಕ್ಷಣವೇ ಅವರನ್ನು ಸದನದಿಂದ ಹೊರಗೆ ಕರೆದೊಯ್ಯುವಂತೆ ಸ್ಪೀಕರ್ ದಿಲೀಪ್ ವಾಲ್ಸೆ ಪಾಟೀಲ್ ಸೂಚಿಸಿದರು.

## ಮಿನಿ ಸುದ್ದಿ

### ■ ಐಎಸ್‌ಐ ಏಜೆಂಟ್ ಫಾಯ್‌ಗೆ ಗೃಹಬಂಧನ

**ವಾಷಿಂಗ್ಟನ್:** ಕಾಶ್ಮೀರ ವಿಷಯದ ಬಗ್ಗೆ ಲಾಬಿ ಮಾಡಲು ಅಮೆರಿಕ ಸಂಸದರಿಗೆ ಆಮಿಷವೊಡ್ಡಿದ ಕಾರಣಕ್ಕೆ ಬಂಧಿತನಾಗಿದ್ದ ಪಾಕಿಸ್ತಾನ ಐಎಸ್‌ಐ ಏಜೆಂಟ್ ಗುಲಾಂ ನಬಿ ಫಾಯ್‌ಗೆ ವರ್ಜೀನಿಯಾ ನ್ಯಾಯಾಲಯ ಜಾಮೀನು ನೀಡಿದೆ. ಆದರೆ ಫಾಯ್‌ನನ್ನು ಗೃಹ ಬಂಧನದಲ್ಲಿರಿಸುವಂತೆ ಅದು ಸೂಚಿಸಿದೆ. ಇದೇ ವೇಳೆ, ವಿದ್ಯುನ್ಮಾನ ಕಣ್ಗಾವಲು ಹಾಗೂ ಮೊಣಕಾಲಿಗೆ ರೇಡಿಯೋ ಟ್ಯಾಗ್ ಅಳವಡಿಸುವ ಮೂಲಕ ಆತನ ಚಲನವಲನಗಳ ಮೇಲೆ ನಿಗಾಕ್ಕೂ ಅದು ಸೂಚಿಸಿದೆ.

### ■ ಆತ್ಮಾಹುತಿ ದಾಳಿಗೆ ಕಂದಹಾರ್ ಮೇಯರ್ ಬಲಿ

**ಕಂದಹಾರ್:** ಆತ್ಮಾಹುತಿ ದಾಳಿಕೋರನೊಬ್ಬ ಬುಧವಾರ ನಡೆಸಿದ ದಾಳಿಯಲ್ಲಿ ಆಫ್ಘಾನಿಸ್ತಾನದ ಕಂದಹಾರ್‌ನ ಮೇಯರ್ ಗುಲಾಮ್ ಹೈದರ್ ಹಮಿದಿ ಸಾವನ್ನಪ್ಪಿದ್ದಾರೆ. ಪೇಟಾದಲ್ಲಿ ಸ್ಫೋಟಕ ವಸ್ತುಗಳನ್ನು ತುಂಬಿಕೊಂಡು ಬಂದಿದ್ದ ವ್ಯಕ್ತಿಯೊಬ್ಬ ಹಮಿದಿ ಅವರಿದ್ದ ಸರ್ಕಾರಿ ಕಚೇರಿಯೊಳಗೆ ಈ ಕೃತ್ಯ ನಡೆಸಿದ್ದಾನೆ. ಇದರೊಂದಿಗೆ ಕಳೆದ ಒಂದು ತಿಂಗಳಲ್ಲಿ ಆಫ್ಘನ್ ಸರ್ಕಾರದ ಮೂವರು ಹಿರಿಯರು ಉಗ್ರರ ದಾಳಿಗೆ ಬಲಿಯಾದಂತಾಗಿದೆ. ಈ ಹಿಂದೆ ಆಫ್ಘನ್ ಅಧ್ಯಕ್ಷ ಹಮೀದ್ ಕರ್ಜೈ ಅವರ ಸೋದರ ಅಹಮದ್ ವಾಲಿ ಕರ್ಜೈ ಮತ್ತು ಹಮೀದ್ ಕರ್ಜೈ ಅವರ ಸಲಹೆಗಾರನಾಗಿದ್ದ ಜಾನ್ ಮಹಮ್ಮದ್ ಖಾನ್ ಅವರನ್ನು ಹತ್ಯೆ ಮಾಡಲಾಗಿತ್ತು.

### ■ ಸರ್ವಾಧಿಕಾರಿ ಮುಬಾರಕ್ 'ಉಪವಾಸ ತಂತ್ರ'

**ಕೈರೋ:** ಭ್ರಷ್ಟಾಚಾರ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಆರೋಪಿಯಾಗಿರುವ ಈಜಿಪ್ಟ್‌ನ ಮಾಜಿ ಸರ್ವಾಧಿಕಾರಿ ಹೊಸ್ನಿ ಮುಬಾರಕ್ ಆಸ್ಪತ್ರೆಯಲ್ಲಿ ಉಪವಾಸದ ತಂತ್ರಕ್ಕೆ ಶರಣಾಗಿದ್ದಾರೆ. ಮುಬಾರಕ್ ಮೇಲೆ ಹೊರಿಸಲಾಗಿರುವ ಆರೋಪಗಳು ಸಾಬೀತಾದರೆ ಅವರಿಗೆ ಗಲ್ಲು ಶಿಕ್ಷೆ ವಿಧಿಸುವ ಸಾಧ್ಯತೆಯೂ ಇದೆ. ಇದರಿಂದ ಹೆದರಿರುವ ಮುಬಾರಕ್ ಕಳೆದ ಕೆಲ ದಿನಗಳಿಂದ ದ್ರವಾಹಾರ ಮಾತ್ರ ಸೇವನೆ ಮಾಡುತ್ತಿದ್ದಾರೆ. ಆ.3ರಿಂದ ಮುಬಾರಕ್ ಅವರ ವಿಚಾರಣೆ ಪುನಾರಂಭವಾಗಬೇಕಿದ್ದು, ಇದನ್ನು ಮುಂದೂಡುವ ನಿಟ್ಟಿನಲ್ಲಿ ಅವರು ಈ ತಂತ್ರಕ್ಕೆ ಶರಣಾಗಿದ್ದಾರೆ ಎನ್ನಲಾಗಿದೆ.

### ■ ವರದಕ್ಷಿಣೆ ಕಿರುಕುಳ: ಚಿರಂಜೀವಿ ಅಳಿಯ ಶರಣು

**ಹೈದರಾಬಾದ್:** ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ನಟ ಚಿರಂಜೀವಿ ಅಳಿಯ ಶಿರೀಶ್ ಭಾರದ್ವಾಜ್ ಸ್ಥಳೀಯ ನ್ಯಾಯಾಲಯದಲ್ಲಿ ಶರಣಾಗಿದ್ದಾನೆ. ಚಿರಂಜೀವಿ ಮಗಳು ಶ್ರೀಜಾಳನ್ನು ಚಿರು ವಿರೋಧದ ನಡುವೆಯೂ 2007ರಲ್ಲಿ ಶಿರೀಶ್ ಮದುವೆಯಾಗಿದ್ದ. ಆದರೆ ಮದುವೆ ನಂತರ ಇಬ್ಬರ ಮಧ್ಯೆಯೂ ಒಡಕುಂಟಾಗಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಈ ನಡುವೆ, ಪತಿ ಮತ್ತು ಅತ್ತೆ-ಮಾವ ತನಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದಾರೆ ಎಂದು ಶ್ರೀಜಾ ಪೊಲೀಸರಿಗೆ ದೂರು ನೀಡಿದ್ದಳು. ಬಳಿಕ 4 ತಿಂಗಳಿಂದ ತಲೆಮರೆಸಿಕೊಂಡಿದ್ದ ಶಿರೀಶ್ ಈಗ ಕೋರ್ಟ್‌ಗೆ ಶರಣಾಗಿದ್ದಾನೆ. ಆಗಸ್ಟ್ 8ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

## ಪ್ರಶಸ್ತಿ ಗರಿ

■ 'ಸೂರ್ಯನಿಗೇ ಪ್ಲಗ್' ಹಾಕಿದ ಕನ್ನಡಿಗನಿಗೆ ಅಂತಾರಾಷ್ಟ್ರೀಯ ಪ್ರಶಸ್ತಿ

# ಕುಂದಾಪುರದ ಹರೀಶ್ ಹಂದೆಗೆ ಪ್ರತಿಷ್ಠಿತ ಮ್ಯಾಗ್ಸೆಸೆ

- ಇಬ್ಬರು ಭಾರತೀಯರೂ ಸೇರಿ, 6 ಜನರಿಗೆ 'ಏಷ್ಯಾದ ನೊಬೆಲ್' ಪ್ರಶಸ್ತಿ ಘೋಷಣೆ
- ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸೆಲ್ಕೋ ಸಂಸ್ಥಾಪಕಗೆ ಅಂತಾರಾಷ್ಟ್ರೀಯ ಗೌರವ



ರೇಷ್ಮೆ ಕೃಷಿಯಲ್ಲಿ ಸೆಲ್ಕೋ ಲೈಟ್ ಬಳಕೆ



ಈ ಪ್ರಶಸ್ತಿ ಸಾಂಘಿಕ ಪ್ರಯತ್ನ ನಡೆಸಿದ ಸೆಲ್ಕೋದವರಿಗೆ ಸಂದ ಗೌರವ. ಮ್ಯಾಗ್ಸೆಸೆ ಪ್ರಶಸ್ತಿ ಸಮಾನತೆಯ ಸದೃಢ ಸಮಾಜ ನಿರ್ಮಾಣ ಹಾದಿಯಲ್ಲಿ ಸೆಲ್ಕೋ ಮಾಡುತ್ತಿರುವ ಸಾಧನೆಯನ್ನು ದೃಢೀಕರಿಸಿದೆ.

● **ಹರೀಶ್‌ಹಂದೆ**

**1995**ರಲ್ಲಿ ಹರೀಶ್ ಹಂದೆಯವರು ಸೆಲ್ಕೋ ಸೋಲಾರ್ ಸೈಟ್ ಸಂಸ್ಥೆ ಆರಂಭಿಸಿದರು. ಸೌರಶಕ್ತಿಯಲ್ಲಿ ಅಪಾರ ಸಾಧನೆ ಮಾಡಿರುವ ಈ ಸಂಸ್ಥೆಗೆ 2005, 2007ರಲ್ಲಿ ಗ್ರೀನ್ ಆಸ್ಕರ್, 2005ರಲ್ಲಿ ಅಮೆರಿಕಾದ ಟೆಕ್ ಮ್ಯೂಸಿಯಂ ಪ್ರಶಸ್ತಿ 2007ರಲ್ಲಿ ಕೆಮ್ಕಾ ಸಾಮಾಜಿಕ ಉದ್ಯಮಿ ಪ್ರಶಸ್ತಿ, 2009ರಲ್ಲಿ ಫೈನಾನ್ಷಿಯಲ್ ಟೈಮ್ಸ್ ಪ್ರಶಸ್ತಿಗಳು ಲಭಿಸಿವೆ. 2008ರಲ್ಲಿ ಇಂಡಿಯಾ ಟುಡೆ ಪತ್ರಿಕೆ ಸಿದ್ಧಪಡಿಸಿದ್ದ ದೂರದೃಷ್ಟಿಯ ಭವಿಷ್ಯದ 50 ನಾಯಕರ ಪಟ್ಟಿಯಲ್ಲಿ ಹಂದೆಯವರ ಹೆಸರೂ ಇತ್ತು. ಅಮೆರಿಕ ಅಧ್ಯಕ್ಷ ಒಬಾಮಾ ಭಾರತಕ್ಕೆ ಆಗಮಿಸಿದ್ದಾಗ ಹಂದೆಯವರನ್ನೂ ಭೇಟಿ ಮಾಡಿದ್ದರು. ಸೆಲ್ಕೋ ಸಂಸ್ಥೆ ಪ್ರಸ್ತುತ ರಾಜ್ಯಾದ್ಯಂತ 25 ಶಾಖೆಗಳನ್ನು, 176 ಉದ್ಯೋಗಿಗಳನ್ನು ಹೊಂದಿದೆ.



ಗೃಹ ಬಳಕೆಗೂ ಸೆಲ್ಕೋ ಲೈಟ್

ಹೆಗ್ಗೋಡು ನಿನಾಸಂನ ಕೆ.ವಿ. ಸುಬ್ಬಣ್ಣ ಹಾಗೂ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್ ಈ ಹಿಂದೆ ಮ್ಯಾಗ್ಸೆಸೆ ಪ್ರಶಸ್ತಿ ಪಡೆದ ಕನ್ನಡಿಗರು.

**ಮನಿಲಾ:** ಭಾರತದ ಉದ್ದಗಲಕ್ಕೂ ಸೋಲಾರ್ ದೀಪಗಳ ಮೂಲಕ ಕ್ರಾಂತಿ ಮಾಡಿದ ಕನ್ನಡಿಗ ಹರೀಶ್ ಹಂದೆ ಸೇರಿದಂತೆ ಆರು ಸಾಧಕರಿಗೆ ಈ ಬಾರಿಯ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಘೋಷಿಸಲಾಗಿದೆ. ಈ ಪೈಕಿ ಮಹಾರಾಷ್ಟ್ರದ ನೀಲಿಮಾ ಮಿಶ್ರಾ ಕೂಡಾ ಸೇರಿದ್ದಾರೆ.

ಕರ್ನಾಟಕದ ಕುಂದಾಪುರದಲ್ಲಿ ಜನಿಸಿದ ಬಳಿಕ ಒರಿಸ್ಸಾಕ್ಕೆ ತೆರಳಿ ಅಲ್ಲೇ ವಿದ್ಯಾಭ್ಯಾಸ ಮಾಡಿದ ಹರೀಶ್ ಐಐಟಿ ಖರಗ್‌ಪುರದಿಂದ ಪದವಿ ಪಡೆದರು. ಬಳಿಕ ಅಮೆರಿಕದ ಮೆಸಾಚ್ಯುಸೆಟ್ಸ್ ವಿವಿಯಿಂದ ಉನ್ನತ ಪದವಿ ಪಡೆದು ಬಳಿಕ ಭಾರತಕ್ಕೆ ಮರಳಿದರು.

ಈ ವೇಳೆ ದೇಶದ ಗ್ರಾಮೀಣ ಭಾಗದ ಜನ ವಿದ್ಯುತ್ ಸಮಸ್ಯೆಯಿಂದ ಬಳಲುತ್ತಿರುವುದನ್ನು ಕಂಡ ಹರೀಶ್ ಅವರಿಗಾಗಿ ಸುಲಭವಾಗಿ ವಿದ್ಯುತ್ ಪೂರೈಸುವ ಸೋಲಾರ್ ವಿದ್ಯುತ್ ದೀಪಗಳ ತಯಾರಿಕೆಗೆ ತೊಡಗಿಸಿಕೊಂಡರು. ಇದರ ಫಲವಾಗಿಯೇ ಬೆಂಗಳೂರಿನಲ್ಲಿ ಸೆಲ್ಕೋ ಕಂಪನಿ ಆರಂಭವಾಯಿತು. ದಶಕಗಳ ಹಿಂದೆ ಆರಂಭವಾದ ಸೆಲ್ಕೋ ಹಾಲಿ ದೇಶದ ಉದ್ದಗಲಕ್ಕೂ 1.2 ಲಕ್ಷ ಮನೆಗಳು ಸೌರಶಕ್ತಿಯಿಂದ ಬೆಳಗುವಂತೆ ಮಾಡಿದೆ. ಹಾಲಿ ಸೌರಶಕ್ತಿ ದೀಪಗಳ ಉತ್ಪಾದನೆಯಲ್ಲಿ ಸೆಲ್ಕೋ ದೇಶದಲ್ಲಿಯೇ ನಂ. 1 ಕಂಪನಿ ಎಂಬ ಹೆಸರು ಮಾಡಿದೆ.

ಸೌರಶಕ್ತಿ ಕ್ಷೇತ್ರದಲ್ಲಿ ವಿನೂತನ ಉಪಕರಣಗಳ ಮೂಲಕ ಬಡವರ ಮನೆಗೂ ಸುಲಭವಾಗಿ ವಿದ್ಯುತ್ ದೊರಕುವಂತೆ ಮಾಡಿದ ಸಾಧನೆಗಾಗಿ ಹರೀಶ್‌ಗೆ ಈ ಗೌರವ ನೀಡಲಾಗಿದೆ.

ಇನ್ನು ಮಹಾರಾಷ್ಟ್ರದಲ್ಲಿ 'ಭಗಿನಿ ನಿವೇದಿತಾ ಗ್ರಾಮೀಣ ವಿಜ್ಞಾನ ನಿಕೇತನ' ಎಂಬ ಸರ್ಕಾರೇತರ ಸಂಘಟನೆ ಹೆಸರಲ್ಲಿ ಕೃಷಿ, ಸಮುದಾಯ ಸ್ವಸಹಾಯ ಸಂಘಗಳ ಮೂಲಕ ಬಡವರ ಏಳಿಗೆಗೆ ಹೋರಾಟ ಮಾಡುತ್ತಿರುವ ಜಲ್‌ಗಾಂವ್ ಜಿಲ್ಲೆಯ ನೀಲಿಮಾ ಮಿಶ್ರಾಗೆ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

**ಪ್ರಶಸ್ತಿ ಪಡೆದ ಇತರರು:** ಫಿಲಿಫೈನ್‌ನೋ ಚಾರಿಟಿ ಗ್ರೂಪ್‌ನ ಪರ್ಯಾಯ ದೇಶೀಯ ಅಭಿವೃದ್ಧಿ ಪ್ರತಿಷ್ಠಾನ(ಎಐಡಿಎಫ್‌ಐ), ಇಂಡೋನೇಷ್ಯಾದಲ್ಲಿ ಬಾಲಕಿಯರಿಗಾಗಿ ಇಸ್ಲಾಮಿಕ್ ವಿದ್ಯಾಲಯ ತೆರೆದ ಹಸನೈನ್ ಜುಯೈನಿ, ಮೈಕ್ರೋ ಜಲ ವಿದ್ಯುತ್ ಯೋಜನೆ ಹೆಗ್ಗಳಿಕೆಯ ತ್ರಿ ಮುಂಪುನಿ, ಆಂತರಿಕ ಸಂಘರ್ಷಕ್ಕೆ ತುತ್ತಾಗಿರುವ ಕಾಂಬೋಡಿಯಾದಲ್ಲಿ ಪ್ರಜಾಪ್ರಭುತ್ವ ಮರುಸ್ಥಾಪನೆಗೆ ಶ್ರಮಿಸುತ್ತಿರುವ ಕೌಲ್ ಪನ್ಹಾ ಅವರಿಗೆ 2011ನೇ ಸಾಲಿನ 'ಏಷ್ಯಾದ ನೊಬೆಲ್' ಎಂದೇ ಖ್ಯಾತಿಗಳಿಸಿರುವ ಮ್ಯಾಗ್ಸೆಸೆ ಪ್ರಶಸ್ತಿ ಘೋಷಿಸಲಾಗಿದೆ.

## ಅಲಲಾ ಸುದ್ದಿ!

## ಆನೆಗಳು ಹಳೇ ಸ್ನೇಹಿತರನ್ನು ಎಂದೂ ಮರೆಯೋಲ್ಲ!

ಆನೆಗಳು ಸಮುದಾಯ ಜೀವಿಗಳು ಎಂಬುಂದು ಎಲ್ಲರಿಗೂ ತಿಳಿದ ವಿಷಯ. ಆದರೆ ಹೊಸ ವಿಷಯ ಅಂದ್ರೆ ಕೆಲವೊಂದು ಆನೆಗಳು ನಾವು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚು ಸಮುದಾಯ ಜೀವಿಗಳಂತೆ. ಹಳೇ ಸ್ನೇಹಿತರನ್ನೂ ಯಾವುದೇ ಕಾರಣಕ್ಕೂ ಮರೆಯೋದಿಲ್ವಂತೆ. ಬಹಳ ವರ್ಷ ದೂರವಿದ್ದ ಹೊರತಾಗಿಯೂ ಅವು ತಮ್ಮ ಹಳೇ ಸ್ನೇಹಿತರೊಂದಿಗಿನ ಸಂಬಂಧವನ್ನು ಮರೆಯುವುದಿಲ್ಲ ಎಂದು ಇತ್ತೀಚಿನ ಸಂಶೋಧನೆ ಹೇಳಿದೆ. ಅದರಲ್ಲೂ ಏಷ್ಯಾದ ಆನೆಗಳಂತೂ ಒಮ್ಮೆ ನೋಡಿದ ಸ್ನೇಹಿತರ ಮುಖವನ್ನೂ ಎಂದೂ ಮರೆಯುವುದಿಲ್ಲವಂತೆ. ತಾವು ಸಾಗುವ ಹಾದಿಯಲ್ಲಿ ಯಾವುದಾದರೂ ಸತ್ತ ಆನೆಯ ಮೂಳೆ ನೋಡಿದರೆ ಅದರ ಬಗ್ಗೆ ಮರುಕ ಪಡುತ್ತವೆ ಎಂದು ಸಂಶೋಧನೆ ಹೇಳಿದೆ. ಈ ರೀತಿ ಸಮುದಾಯ ಚಟುವಟಿಕೆ ಓಕೆ, ಆದರೆ ದೂರದಲ್ಲಿರೋ ಸ್ನೇಹಿತರ ಜೊತೆ ಸಂಪರ್ಕಕ್ಕಾಗಿ ಫೇಸ್‌ಬುಕ್ ಬೇಕು ಅಂತಾ ನಗರಗಳಿಗೇನಾದ್ರೂ ಕಾಲಿಟ್ರೆ ಮಾತ್ರ ಮನುಷ್ಯರಿಗೆ ತೊಂದರೆ ತಪ್ಪಿದ್ದಲ್ಲ.